ಮೂಲ ದಾವಾ ಸಂಖ್ಯೆ 48/2016

ಪಿಡಬ್ಲ್ಯೂ-2

**<u>(ದಿನಾಂಕ 01.08.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)</u>**

**<u>ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಪಿ ಜೆ ಜಿ ವಕೀಲರಿಂದಃ-</u>**

ಅರಸಿಕೆರೆಯ ಸರ್ವೆ ನಂಬರ 35 ಎಷ್ಟು ಎಕರೆ ಎಂದರೆ 7 ಎಕರೆ ಇರುತ್ತದೆ. ಅದು 51 ಎಕರೆ 89 ಸೆಂಟ್ಸ್ ಇದೆ ಎಂದರೆ ಸರಿಯಲ್ಲ. ಸದರಿ ಆಸ್ತಿಯ ಪಹಣಿಯನ್ನು ನಾನು ನೋಡಿರುವುದಿಲ್ಲ. ನಾನು ಅವಿದ್ಯಾವಂತ. ನನಗೆ ಓದಲು ಬರೆಯಲು ಬಾರದ ಕಾರಣ ದಾಖಲೆಗಳ ಬಗ್ಗೆ ಮಾಹಿತಿ ಇಲ್ಲಾ ಎಂದರೆ ಸರಿ. 51 ಎಕರೆ 89 ಸೆಂಟ್ಸ್ ಆಸ್ತಿಯಲ್ಲಿ ಬರಿ ಕಲ್ಲು ಬಂಡೆಗಳು ಇವೆ ಎಂದರೆ ಸರಿ. ಪಹಣಿ ಪತ್ರಿಕೆಯಲ್ಲಿ ಅದನ್ನು ಗುಡ್ಡಾ ಪರಂಪೋಕ್ ಅಂತಾ ನಮೂದು ಮಾಡಿದ್ದಾರೆ ಎಂದರೆ ಸರಿ. ಸದರಿ ಆಸ್ತಿಯನ್ನು ಸಾಗುವಳಿ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ಅರಸಿಕೆರೆಯ ಸರ್ವೆ ನಂಬರ 35 ಸರ್ಕಾರಿ ಗುಡ್ಡಾ ಪರಂಪೋಕ್ ಆಸ್ತಿ ಎಂದರೆ ಸರಿ. ತಹಶೀಲ್ದಾರ ಸ್ಥಳಕ್ಕೆ ಬಂದು ಅರಸಿಕೆರೆಯ ಸರ್ವೆ ನಂಬರ 35 ಸರ್ವೆ ಮಾಡಿ ಹೋಗಿದ್ದಾರೆ ಎಂದರೆ ಗೊತ್ತಿಲ್ಲಾ. ಅರಣ್ಯ ಇಲಾಖೆಯವರು ಕೂಡ ಅರಸಿಕೆರೆಯ ಸರ್ವೆ ನಂಬರ 35 ಸ್ಥಳಕ್ಕೆ ಬಂದು ಸರ್ವೆ ಮಾಡಿದ್ದಾರೆ ಎಂದರೆ ಗೊತ್ತಿಲ್ಲಾ. ಅರಸಿಕೆರೆಯ ಸರ್ವೆ ನಂಬರ 35 ಗುಡ್ಡಾ ಪರಂಪೋಕ್ ಆಸ್ತಿ ಅಂತಾ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ತಹಶೀಲ್ದಾರ ಮತ್ತು ಅರಣ್ಯ ಇಲಾಖೆಯವರು ಸರ್ವೆ ಮಾಡಿದ ನಂತರ ವರದಿಯೊಂದಿಗೆ ಮಾಹಿತಿ ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲಾ. ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರು ಕಲ್ಲು ಕ್ವಾರಿ ಮಾಡಲು ಪ್ರತಿವಾದಿ 7 ರಿಂದ 9 ಮತ್ತು 12 ರವರಿಗೆ ಪರವಾನಿಗೆ ಕೊಟ್ಟಿದ್ದಾರೆ ಎಂದರೆ ಸರಿ. ಪ್ರತಿವಾದಿ 7 ರಿಂದ 9 ಮತ್ತು 12 ರವರು ಸರ್ಕಾರಿ ಭೂಮಿಯಲ್ಲಿ ಕಲ್ಲು ತೆಗೆಯುತ್ತಿದ್ದಾರೆ ಎಂದರೆ ಸರಿ. ವಾದಿ ಸ್ವಾಧೀನದಲ್ಲಿ ಇದ್ದಾನೆ ಎಂದು ಹೇಳುವ ಆಸ್ತಿಯ ಚೆಕ್ ಬಂದಿ ಹೇಳಲು ಬರುತ್ತದೆ. ದಕ್ಷಿಣಕ್ಕೆ ಕನ್ನಮ್ಮನವರ

ನಿಂಗಪ್ಪ ನವರ ಹೊಲ ಇರುತ್ತದೆ. ಪಶ್ಚಿಮಕ್ಕೆ ಖಾಸಿಂ ಸಾಬ್ ರವರ ಆಸ್ತಿ ಇರುತ್ತದೆ. ನನ್ನ ಹೊಲ ನನ್ನ ಹೆಸರಿನಲ್ಲಿ ಇರುತ್ತದೆ. ನಾನು ಈ ದಿನ ಪಹಣಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲಾ. ನನ್ನ ಜಮೀನಿನ ಚೆಕ್ ಬಂದಿ ಪೂರ್ವಕ್ಕೆ ಹುಣಸೆಹಳ್ಳಿ ಸಿದ್ದಪ್ಪನ ಹೊಲ, ಪಶ್ಚಿಮಕ್ಕೆ ಸರ್ಕಾರದ ಕ್ವಾರಿ, ಉತ್ತರಕ್ಕೆ ಸರ್ಕಾರದ ಕ್ವಾರಿ, ದಕ್ಷಿಣಕ್ಕೆ ಸಿದ್ದಪ್ಪನವರ ಹೊಲ. ನನ್ನ ಹೆಸರಿನಲ್ಲಿ ಯಾವುದೇ ಜಮೀನು ಇಲ್ಲಾ ಹೀಗಾಗಿ ನಾನು ದಾಖಲೆ ಹಾಜರುಪಡಿಸಿರುವುದಿಲ್ಲಾ ಎಂದರೆ ಸರಿಯಲ್ಲ. ವಾದಿಯರು ನನಗೆ ಸಂಬಂಧಿಕರು. ಹೀಗಾಗಿ ವಾದಿಯರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ. ಪ್ರತಿವಾದಿ 7 ರಿಂದ 9 ಮತ್ತು 12 ರವರು ಸರ್ಕಾರಿ ಭೂಮಿಯಲ್ಲಿ ಕ್ವಾರಿ ಮಾಡುತ್ತಿರುವ ಕಾರಣ ಯಾರಿಗೂ ತೊಂದರೆ ಆಗುತ್ತಿಲ್ಲಾ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪ್ರತಿವಾದಿ ನಂಬರ 13 ಮತ್ತು 14 ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಮತ್ತು ಕಾನೂನಿನ ಅಂಶದ ಮೇಲೆ ಪಾಟೀ ಸವಾಲು ಮಾಡಲು ತಯಾರು ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು.**

**(ಮಾನ್ಯ ಎ ಜಿ ಪಿಯವರು ಸಮಯ ಕೋರಿದ್ದು ಮುಂ ದುವರಿದ ಪಾಟೀ ಸವಾಲಿಗೆ ಸಮಯ ನೀಡಿ ಅನುಮತಿಸಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ

ನ್ಯಾಯಾಧೀಶರು, ಹರಪನಹಳ್ಳಿ.

ಮೂಲ ದಾವಾ ಸಂಖ್ಯೆ 48/2016

ಪಿಡಬ್ಲ್ಯೂ-3

**(ದಿನಾಂಕ 01.08.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಪಿ ಜೆ ಜಿ ವಕೀಲರಿಂದಃ-**

ಅರಸಿಕೆರೆಯ ಸರ್ವೆ ನಂಬರ 35 ಎಷ್ಟು ಎಕರೆ ಎಂದರೆ 7 ಎಕರೆ ಇರುತ್ತದೆ. ಒಟ್ಟು ಕ್ಷೇತ್ರ ಗೊತ್ತಿಲ್ಲಾ. ನನಗೆ ಓದಲು ಬರೆಯಲು ಬಾರದ ಕಾರಣ ದಾಖಲೆಗಳ ಬಗ್ಗೆ ಮಾಹಿತಿ ಇಲ್ಲಾ ಎಂದರೆ ಸರಿ. ನಾನು ಅವಿದ್ಯಾವಂತ. ಸರ್ವೆ ನಂಬರ 35 ಆಸ್ತಿಯಲ್ಲಿ ಬರಿ ಕಲ್ಲು ಬಂಡೆಗಳು ಇವೆ ಎಂದರೆ ಸರಿ. ಪಹಣಿ ಪತ್ರಿಕೆಯಲ್ಲಿ ಅದನ್ನು ಗುಡ್ಡಾ ಪರಂಪೋಕ್ ಅಂತಾ ನಮೂದು ಮಾಡಿದ್ದಾರೆ ಎಂದರೆ ಸರಿ. ಸದರಿ ಆಸ್ತಿಯನ್ನು ಸಾಗುವಳಿ ಮಾಡಲು ಬರುವುದಿಲ್ಲ ಎಂದರೆ ಸರಿಯಲ್ಲ. ಅರಸಿಕೆರೆಯ ಸರ್ವೆ ನಂಬರ 35 ಸರ್ಕಾರಿ ಗುಡ್ಡಾ ಪರಂಪೋಕ್ ಆಸ್ತಿ ಎಂದರೆ ಸರಿ. ತಹಶೀಲ್ದಾರ ಸ್ಥಳಕ್ಕೆ ಬಂದು ಅರಸಿಕೆರೆಯ ಸರ್ವೆ ನಂಬರ 35 ಸರ್ವೆ ಮಾಡಿ ಹೋಗಿದ್ದಾರೆ ಎಂದರೆ ಸರಿಯಲ್ಲ. ಅರಣ್ಯ ಇಲಾಖೆಯವರು ಕೂಡ ಅರಸಿಕೆರೆಯ ಸರ್ವೆ ನಂಬರ 35 ಸ್ಥಳಕ್ಕೆ ಬಂದು ಸರ್ವೆ ಮಾಡಿದ್ದಾರೆ ಎಂದರೆ ಸರಿಯಲ್ಲ. ಅರಸಿಕೆರೆಯ ಸರ್ವೆ ನಂಬರ 35 ಗುಡ್ಡಾ ಪರಂಪೋಕ್ ಆಸ್ತಿ ಅಂತಾ ಗಣಿ ಮತ್ತು ಭೂ ವಿಜ್ಞಾನ ಇಲಾಖೆಗೆ ತಹಶೀಲ್ದಾರ ಮತ್ತು ಅರಣ್ಯ ಇಲಾಖೆಯವರು ಸರ್ವೆ ಮಾಡಿದ ನಂತರ ವರದಿಯೊಂದಿಗೆ ಮಾಹಿತಿ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

ವಾದಿಯರು ಯಾರ ಯಾರ ವಿರುದ್ಧ ದಾವೆ ಹೂಡಿದ್ದಾರೆಂದು ಗೊತ್ತಿಲ್ಲಾ. ಏನು ಪರಿಹಾರ ಕೇಳಿದ್ದಾರೆ ಎಂದರೆ ಭೂಮಿ ಕೊಡಿ ಅಂತಾ ವಾದಿಯರು ಕೇಸ್ ಹಾಕಿದ್ದಾರೆ. ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರು ಕಲ್ಲು ಕ್ವಾರಿ ಮಾಡಲು ಪ್ರತಿವಾದಿ 7 ರಿಂದ 9 ಮತ್ತು 12 ರವರಿಗೆ ಪರವಾನಿಗೆ ಕೊಟ್ಟಿದ್ದಾರೆ ಎಂದರೆ ಸರಿ. 7 ಎಕರೆ ಆಸ್ತಿಯಲ್ಲಿ ಕೂಡ ಗಣಿಗಾಗಿಕೆ ಮಾಡುತ್ತಿದ್ದಾರೆ. ವಾದಿಯವರು ನಮ್ಮ ಪಕ್ಕದ ಹೊಲದವರು. ಪ್ರತಿವಾದಿ 7 ರಿಂದ 9 ಮತ್ತು

12 ರವರು ಸರ್ಕಾರಿ ಭೂಮಿಯಲ್ಲಿ ಕಲ್ಲು ತೆಗೆಯುತ್ತಿದ್ದಾರೆ ಎಂದರೆ ಸರಿ. ಪ್ರತಿವಾದಿ 7 ರಿಂದ 9 ಮತ್ತು 12 ರವರು ಸರ್ಕಾರಿ ಭೂಮಿಯಲ್ಲಿ ಕಲ್ಲು ತೆಗೆಯುತ್ತಿರುವ ಕಾರಣ ವಾದಿಯರಿಗೆ ತೊಂದರೆ ಇಲ್ಲಾ ಎಂದರೆ ಸರಿಯಲ್ಲ. ವಾದಿಯವರು ನಮ್ಮ ವಿಶ್ವಾಸಿಕರು ಆಗಿರುವ ಕಾರಣ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

**ಪ್ರತಿವಾದಿ ನಂಬರ 13 ಮತ್ತು 14 ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಮತ್ತು ಕಾನೂನಿನ ಅಂಶದ ಮೇಲೆ ಪಾಟೀ ಸವಾಲು ಮಾಡಲು ತಯಾರು ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು.**

**(ಮಾನ್ಯ ಎ ಜಿ ಪಿಯವರು ಸಮಯ ಕೋರಿದ್ದು ಮುಂ ದುವರಿದ ಪಾಟೀ ಸವಾಲಿಗೆ ಸಮಯ ನೀಡಿ ಅನುಮತಿಸಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.

ಮೂಲ ದಾವಾ ಸಂಖ್ಯೆ 48/2016

ಪಿಡಬ್ಲ್ಯೂ-4

**(ದಿನಾಂಕ 01.08.2024 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣೀಕರಿಸಲಾಯಿತು.)**

**ಪಾಟೀ ಸವಾಲು ಪ್ರತಿವಾದಿ ಪರ ಶ್ರೀ ಪಿ ಜೆ ಜಿ ವಕೀಲರಿಂದಃ-**

ನಾನು 5 ನೇ ತರಗತಿ ಓದಿರುತ್ತೇನೆ. ಅರಸಿಕೆರೆಯ ಸರ್ವೆ ನಂಬರ 35 ಎಷ್ಟು ಎಕರೆ ಎಂದರೆ 51 ಎಕರೆ 89 ಸೆಂಟ್ಸ್ ಇರುತ್ತದೆ. ಒಟ್ಟು ಕ್ಷೇತ್ರ ಗೊತ್ತಿಲ್ಲಾ. ನನಗೆ ಓದಲು ಬರೆಯಲು ಬರುವುದಿಲ್ಲ. ಸರ್ವೆ ನಂಬರ 35 ಆಸ್ತಿಯಲ್ಲಿ ಬರಿ ಕಲ್ಲು ಬಂಡೆಗಳು ಇವೆ ಎಂದರೆ ಸರಿ. ತಿಮ್ಮಣ್ಣ ಮತ್ತು ತಿಮ್ಮೇಶ್ ಸಾಗುವಳಿ ಕೂಡ ಮಾಡುತ್ತಿದ್ದರು. ಸಾಗುವಳಿ ಮಾಡುತ್ತಿರುವ ಆಸ್ತಿಯ ಪೂರ್ವಕ್ಕೆ ಪಲ್ಲಗಟ್ಟಿ ಖಾಸಿಂ ಸಾಬ್ ಆಸ್ತಿ, ಪಶ್ಚಿಮಕ್ಕೆ ಖಾಸಿಂಸಾಬ್ ರವರ ಹೊಲ, ಉತ್ತರಕ್ಕೆ ಕನ್ನಮ್ಮರ ಲಿಂಗಪ್ಪನವರ ಆಸ್ತಿ, ದಕ್ಷಿಣಕ್ಕೆ ಕೊಲ್ಲಮ್ಮ ತಿಮ್ಮಪ್ಪನ ಆಸ್ತಿ ಇರುತ್ತದೆ. ಪಹಣಿ ಪತ್ರಿಕೆಯಲ್ಲಿ ಅದನ್ನು ಗುಡ್ಡಾ ಪರಂಪೋಕ್ ಅಂತಾ ನಮೂದು ಮಾಡಿದ್ದಾರೆ ಎಂದರೆ ಸರಿ. ಗಣಿ ಮತ್ತು ಭೂ ವಿಜ್ಞಾನ ಇಲಾಖೆಯವರು ಕಲ್ಲು ಕ್ವಾರಿ ಮಾಡಲು ಪ್ರತಿವಾದಿ 7 ರಿಂದ 9 ಮತ್ತು 12 ರವರಿಗೆ ಪರವಾನಿಗೆ ಕೊಟ್ಟಿದ್ದಾರೆ ಎಂದರೆ ನನಗೆ ಗೊತ್ತಿಲ್ಲಾ. ಅರ್ಜಿ ಸಲ್ಲಿಸಿದ್ದಾರೆ. ಪ್ರತಿವಾದಿ 7 ರಿಂದ 9 ಮತ್ತು 12 ಕಲ್ಲು ಕ್ವಾರಿ ಮಾಡುತ್ತಿದ್ದಾರೆ ಎಂದರೆ ಇರಬಹುದು ನನಗೆ ಗೊತ್ತಿಲ್ಲಾ. ನಾನು ಸರ್ವೆ ನಂಬರ 35 ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಪ್ರತಿವಾದಿ 7 ರಿಂದ 9 ಮತ್ತು 12 ರವರು ಸರ್ಕಾರಿ ಭೂಮಿಯಲ್ಲಿ ಪರವಾನಿಗೆ ಪಡೆದು ಕಲ್ಲು ತೆಗೆಯುತ್ತಿರುವ ಕಾರಣ ವಾದಿಯರಿಗೆ ತೊಂದರೆ ಇಲ್ಲಾ ಎಂದರೆ ಸರಿಯಲ್ಲ. ಸರ್ವೆ ನಂಬರ 35 ಸಾಗುವಳಿ ಮಾಡಲು ಯೋಗ್ಯವಾದ ಜಮೀನು ಅಲ್ಲಾ ಎಂದರೆ ಸರಿಯಲ್ಲ. ವಾದಿಯವರು ನಮ್ಮ ಪಕ್ಕದ ಹೊಲದವರು. ನಮ್ಮ ಜಮೀನಿನ ಪಹಣಿ ಪತ್ರಿಕೆ ಹಾಜರುಪಡಿಸಿರುವುದಿಲ್ಲಾ. ಹಾಜರಪಡಿಸಲು ತೊಂದರೆ ಇಲ್ಲಾ ಎಂದರೆ ಸರಿ. ವಾದಿಯವರು ನಮ್ಮ ವಿಶ್ವಾಸಿಕರು ಆಗಿರುವ ಕಾರಣ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಮೂಲ ದಾವಾ ಸಂಖ್ಯೆ 48/2016

**ಪಿಡಬ್ಲ್ಯೂ-4**

**ಪ್ರತಿವಾದಿ ನಂಬರ 13 ಮತ್ತು 14 ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಮತ್ತು ಕಾನೂನಿನ ಅಂಶದ ಮೇಲೆ ಪಾಟೀ ಸವಾಲು ಮಾಡಲು ತಯಾರು ಇಲ್ಲದ ಕಾರಣ ಪಾಟೀ ಸವಾಲು ಇಲ್ಲ ಅಂತಾ ತೆಗೆದುಕೊಳ್ಳಲಾಯಿತು.**

**(ಮಾನ್ಯ ಎ ಜಿ ಪಿಯವರು ಸಮಯ ಕೋರಿದ್ದು ಮುಂ ದುವರಿದ ಪಾಟೀ ಸವಾಲಿಗೆ ಸಮಯ ನೀಡಿ ಅನುಮತಿಸಲಾಯಿತು. )**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಗಣಕೀಕೃತ ಗೊಳಿಸಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ
ನ್ಯಾಯಾಧೀಶರು, ಹರಪನಹಳ್ಳಿ.